## ವೈವಿಧ್ಯಮಯ ಆರತಿಗಳು

ಯಾವುದೇ ಪೂಜೆಗಳಲ್ಲಿ ಹಾಗೂ ವ್ರತಗಳಲ್ಲಿ ದೇವರಿಗೆ ಮಾಡುವ ಮಂಗಳಾರತಿಯು ಬಹು ಮುಖ್ಯವಾದದ್ದು. ವಿವಿಧ ಬಗೆಯ ಮಂಗಳಾರತಿಯನ್ನು ನೋಡುವುದೇ ಕಣ್ಣಿಗೆ ಒಂದು ಹಬ್ಬ. ತುಪ್ಪದ ಬತ್ತಿಯಿಂದ ಸಿದ್ಧಗೊಂಡ ಕೂರ್ಮಾರತಿ, ಗೋಪುರದಾರತಿ, ನಾಗಾರತಿ, ಹಲಗಾರತಿ, ದೀಪಾರತಿ, ಅರಿಶಿಣ ಹಾಗೂ ಕುಂಕುಮದಾರತಿ ಮುಂತಾದವುಗಳೊಂದಿಗೆ ವಿವಿಧ ಬಗೆಯ ಹೂವು, ಬಾಳೆಹಣ್ಣು, ಸೇಬು ಹಣ್ಣುಗಳಿಂದ ಅಲಂಕರಿಸಿದ ಆರತಿ ತಟ್ಟೆಗಳು ಮಹಿಳೆಯರ ಸೃಜನಶೀಲತೆಯನ್ನು ಬಿಂಬಿಸುತ್ತವೆ. ಸ್ನೇಹಿತೆಯರಾದ ಸುಕನ್ಯಾ ರಾಘವೇಂದ್ರ ಹಾಗೂ ಲತಾ ದೀಕ್ಷಿತ್ ಅವರ ಮನೆಯಲ್ಲಿ 'ಅನಂತನ ಚತುರ್ದಶಿ'ಗೆ, 'ಸತ್ಯನಾರಾಯಣನ ಪೂಜೆ' ಗೆ ಸಿದ್ಧಗೊಳಿಸಿದ ಆರತಿಗಳು ಇವು. ಇವುಗಳನ್ನು ಕಣ್ತುಂಬಿಕೊಳ್ಳುವುದಕ್ಕಾಗಿಯೋ ಏನೋ ಮಂಗಳಾರತಿ ಸಮಯಕ್ಕೆ ಎಲ್ಲರೂ ಇರಬೇಕೆಂಬ ನಿಯಮವೂ ಇದೆ.

**-ಸೀತಾ ಎಸ್.ನಾರಾಯಣ, ಹರಿಹರ**






## ಭಾರತ ಪರ್ವತ ಫಿರಂಗಿ

ಬೆಳಗಾವಿಯ ಕ್ವೀನ್ಸ್ ಗಾರ್ಡನ್ ರೋಡಿನ ಪಕ್ಕದಲ್ಲಿ ಐತಿಹಾಸಿಕ ಪ್ರಸಿದ್ಧ ಶರ್ಕತ್ ಎಂಬ ಹೆಸರಿನ ಉದ್ಯಾನವನ ಇದೆ. ಆ ಉದ್ಯಾನವನದಲ್ಲಿ ಪ್ರದರ್ಶನಕ್ಕಿಟ್ಟ ಫಿರಂಗಿಯೊಂದು ಇಲ್ಲಿ ಬಂದವರ ಗಮನಸೆಳೆಯುತ್ತದೆ. ಹಾಗೂ ಪಕ್ಕದಲ್ಲಿಯೆ ಅದರ ಬಗ್ಗೆ ಮಾಹಿತಿಯೂ ಇದೆ.

ಈ ಫಿರಂಗಿಯ ಹೆಸರು '75/24 ಮಿಮಿ 1ಬಿ ಹೋವಿಝರ್', ಇದನ್ನು ಭಾರತ ಪರ್ವತ ಫಿರಂಗಿ ಎಂದೂ ಕರೆಯುವರು. ಮೂಲತಃ ಫಿರಂಗಿ ದಳದ ಉಪಯೋಗಕ್ಕಾಗಿ ನಿರ್ಮಿಸಲ್ಪಟ್ಟಿದ್ದು ವಿಶೇಷವಾಗಿ ಪರ್ವತ ಪ್ರದೇಶಗಳಲ್ಲಿ ಯುದ್ಧಕ್ಕಾಗಿ ಉಪಯೋಗಿಸಲಾಗುತ್ತಿತ್ತು. ಇದರ ಭಾಗಗಳನ್ನು ಬಿಡಿಬಿಡಿಯಾಗಿ ಬೇರ್ಪಡಿಸಿ ಹೇಸರಗತ್ತೆಗಳ ಬೆನ್ನ ಮೇಲೆ ಹೇರಿ ಯುದ್ಧ ನಡೆಯುವ ಪರ್ವತ ಪ್ರದೇಶಕ್ಕೆ ಒಯ್ದು ಜೋಡಿಸಲಾಗುತ್ತಿತ್ತು. ಇಂತಹ ಫಿರಂಗಿಗಳನ್ನು ಭಾರತೀಯ ಸೈನ್ಯವು ಪಾಕಿಸ್ತಾನ ಹಾಗೂ ಚೀನಾ ವಿರುದ್ಧದ ಯುದ್ಧಗಳು ಹಾಗೂ ಬಾಂಗ್ಲಾ ವಿಮೋಚನಾ ಸಂದರ್ಭದಲ್ಲಿ ಬಳಸಿಕೊಂಡಿದ್ದು, 1980 ರಿಂದ ಇದರ ಬಳಕೆಯನ್ನು ನಿಲ್ಲಿಸಲಾಯಿತು.

**-ಎಂ.ಎನ್.ಜೋಶಿ, ಮೈಸೂರು**

## ಐಸ್ ಕ್ರೀಮ್ ಕಡ್ಡಿಯಿಂದ ಗಣಪ

ಉಡುಪಿಯ ಮರ್ಣೆ ಗ್ರಾಮದ ಕಲಾವಿದ ಮಹೇಶ್ ಮರ್ಣೆ ಈ ಬಾರಿಯ ಗಣೇಶೋತ್ಸವ ಪ್ರಯುಕ್ತ ಐಸ್ ಕ್ರೀಮ್ ಕಡ್ಡಿಯನ್ನು ಬಳಸಿ ಗಣಪ ನಿರ್ಮಿಸಿದ್ದಾರೆ. ಇದಕ್ಕೆ ಸುಮಾರು 3,500 ಐಸ್ ಕ್ರೀಮ್ ಕಡ್ಡಿಗಳನ್ನು ಬಳಸಲಾಗಿದೆ. ಪ್ರಭಾವಳಿ ಮತ್ತು ಆವರಣಗಳ ಅಲಂಕಾರಕ್ಕಾಗಿ ಕೆಂಪು ಮತ್ತು ಕಪ್ಪು ಬಣ್ಣದ ಸುಮಾರು 750 ಬೆಂಕಿಕಡ್ಡಿಗಳನ್ನು ಬಳಸಲಾಗಿದೆ. 24 ಇಂಚು ಎತ್ತರ, 17 ಇಂಚು ಅಗಲವಿರುವ ಈ ಕಲಾಕೃತಿಯು 15 ದಿನಗಳ ಕಠಿಣ ಪರಿಶ್ರಮದಿಂದ ರೂಪುಗೊಂಡಿದೆ.

**- ಗುರುರಾಜ ಬ. ಕನ್ನೂರ, ಬಸವನಬಾಗೇವಾಡಿ**

